# ಕರ್ನಾಟಕ ವಿಧಾನ ಸಭೆ

| | |
|---|---|
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1185 (142 2) |
| ಉತ್ತರಿಸಬೇಕಾದ ದಿನಾಂಕ | 22.08.2025 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮದ ಪ್ರಕರಣ ಸಂಖ್ಯೆ 4ಕ್ಕೆ ತಿದ್ದುಪಡಿ ತರುವ ಮೂಲಕ ಪ್ರಕರಣ 4ಕೆ.ಎನ್ ಸೇರಿದ್ದ ಪರಿಣಾಮವಾಗಿ ಗ್ರಾಮ ಠಾಣಾ ವ್ಯಾಪ್ತಿಯೊಳಗಿನ ನಿವೇಶನಗಳಲ್ಲಿ ಮನೆಗಳನ್ನೆ ನಿರ್ಮಿಸಲು ಲೈಸನ್ಸ್ ಅನ್ನು ಸ್ಥಳಿಯ ಯೋಜನಾ ಪ್ರಾಧಿಕಾರದಿಂದ ಪಡೆಯಬೇಕೆಂಬ ನಿರ್ಬಂಧನೆ ವಿಧಿಸಿರುವುದರಿಂದ ಗ್ರಾಮೀಣ ಜನತೆಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಹಾಗೂ ಕಲಂ-4ಕೆರ ನಿಯಮಾವಳಿಗಳನ್ವಯ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಅನುಮೋದನೆಯಾಗಿರುವ ವಿನ್ಯಾಸಗಳಲ್ಲಿ ಹಾಗೂ ಗ್ರಾಮಠಾಣಾ ಪ್ರದೇಶದಲ್ಲಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ತಾಂತ್ರಿಕ ಅಭಿಪ್ರಾಯ ನೀಡಲಾಗುತ್ತಿದ್ದು, ಕಟ್ಟಡ ಲೈಸೆನ್ಸ್ ಅನ್ನು ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ನೀಡಲಾಗುತ್ತಿದೆ. |
| ಆ) | ಗ್ರಾಮ ಠಾಣಾಯೋಳಗಡೆಯಿರುವ ಸ್ವತ್ತುಗಳ ವಿಸ್ತೀರ್ಣವು ಕಡಿಮೆಯಿದ್ದು ಕುಟುಂಬದ ಅಣ್ಣ ತಮ್ಮಂದಿರುಗಳಲ್ಲಿ ವಿಭಾಗವಾದ ಅವರುಗಳು ಸದರಿ ನಿವೇಶನಗಳಲ್ಲಿ ಮನೆಯನ್ನು ನಿರ್ಮಿಸಿಕೊಳ್ಳುವಾಗ ಯೋಜನಾ ಪ್ರಾಧಿಕಾರದ ಮಾರ್ಗಸೂಚಿಗಳನ್ನು ಅನುಸರಿಸಲು ಸಾಧ್ಯವಾಗದ ಕಾರಣಗಳಿಂದ ಗ್ರಾಮ ಠಾಣಾ ಒಳಗಡೆ ಹಾಗೂ ಗ್ರಾಮ ಠಾಣಾಕ್ಕೆ ಹೊಂದಿಕೊಂಡಂತೆ ಇರುವ ಸರ್ವೆ ನಂಬರ್ ಗಳಲ್ಲಿ ಮನೆ ಕಟ್ಟುವುದಕ್ಕೆ ಈ ನಿರ್ಬಂಧಗಳಿಂದ ವಿನಾಯಿತಿ ನೀಡುವ ಬಗ್ಗೆ ಸರ್ಕಾರವು ಕ್ರಮ ವಹಿಸುವುದೇ; | ಗ್ರಾಮಠಾಣಾ ಹಾಗೂ ಗ್ರಾಮಠಾಣಾಕ್ಕೆ ಹೊಂದಿಕೊಂಡಂತೆ ಇರುವ ಸರ್ವೆ ನಂಬರ್ ಗಳಲ್ಲಿ ಸದರಿ ನಿಯಮಗಳಿಂದ ವಿನಾಯಿತಿ ನೀಡಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಹಾಗೂ ಕಲಂ-4ಕೆ ರ ನಿಯಮಾವಳಿಗಳನ್ವಯ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿ ಅನುಮೋದನೆಯಾಗಿರುವ ವಿನ್ಯಾಸಗಳಲ್ಲಿನ ನಿವೇಶನಗಳಲ್ಲಿ ಹಾಗೂ ಗ್ರಾಮಠಾಣಾ ಪ್ರದೇಶದಲ್ಲಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಅನುಮತಿಯನ್ನು ಪಡೆಯಬೇಕಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ |
| ಇ) | ಅಧಿನಿಯಮದ ಪ್ರಕರಣ 4ಕೆ 10(ಎ)ರಡಿ ತಿಳಿಸಿರುವಂತೆ ರಾಜ್ಯದ ಎಲ್ಲಾ ಗ್ರಾಮಗಳ | |

| | | |
|---|---|---|
| | ಪರಿಮಿತಿಯನ್ನು ವಿಸ್ತರಿಸಲು ಹಾಗೂ ಭೂ ಕಂದಾಯ ಅಧಿನಿಯಮ 64 ಅಡಿಯಲ್ಲಿ ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರವಾಗಲಿ ಅಥವಾ ಯೋಜನಾ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದಿಂದಾಗಲಿ ನಿವೇಶನಗಳನ್ನು ರಚಿಸಿ ಗ್ರಾಮೀಣ ಜನತೆಗೆ ಒದಗಿಸಲು ಕ್ರಮ ಕೈಗೊಳ್ಳದಿರುವ ಕಾರಣ ಅನಿವಾರ್ಯವಾಗಿ ಖಾಸಗಿಯವರ ಜಮೀನಿನಲ್ಲಿ ನಿವೇಶನ ಖರೀದಿಸಿ ಮನೆ ನಿರ್ಮಿಸಿಕೊಂಡಿರುವವರಿಗೆ ಈ ನಿರ್ಬಂಧನೆಗಳನ್ನು ಸಡಿಲಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಈಗಾಗಲೇ ಮನೆ ನಿರ್ಮಿಸಿರುವ ಪ್ರಕರಣಗಳಿಗೆ ಮತ್ತೆ ಮನೆ ನಿರ್ಮಾಣ ಸಂಬಂಧ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ. |

ಸಂಖ್ಯೆ :ನಅಇ 399 ಮೈಅಪ್ರಾ 2025(ಇ)

**(ಬಿ.ಎಸ್ ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು